ಆರ್ ಬಿ ಐ / 2005–06/ 204
**ಡಿಬಿಒಡಿ . ಸಂಖ್ಯೆ .ಲ್ಇಜಿ. ಬಿಸಿ .44 / 09.07.005/ 2005–06**
ನವೆಂಬರ್,11, 2005

ಗೆ,
ಎಲ್ಲಾ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು
(ಆರ್ ಆರ್ ಬಿ ಗಳನ್ನು ಹೊರತುಪಡಿಸಿ)

**ಮಾನ್ಯರೆ**

**ಹಣಕಾಸಿನ ಸೇರ್ಪಡೆ**

2005–06 ನೇ ಸಾಲಿನ ವಾರ್ಷಿಕ ನೀತಿ ತ:ಖ್ತೆಯ ಮಧ್ಯಕಾಲೀನ ಪುನರವಲೋಕನದ 96ನೇ ಪ್ಯಾರಾವನ್ನು ದಯವಿಟ್ಟು ನೋಡಿ.

2. ಏಪ್ರಿಲ್ 2005 ರ ವಾರ್ಷಿಕ ನೀತಿ ತ:ಖ್ತೆಯಲ್ಲಿ ಜನಸಂಖ್ಯೆಯ ಬಹು ದೊಡ್ಡ ವರ್ಗಗಳನ್ನು ಆಕರ್ಷಿಸುವುದಕ್ಕೆ ಬದಲಾಗಿ ಹೊರಗಿಡುತ್ತಿರುವುದಕ್ಕೆ ಅವಕಾಶ ಮಾಡಿಕೊಡುವಂಥ ಬ್ಯಾಂಕಿಂಗ್ ಪದ್ಧತಿಗಳಿಗೆ ಸಂಬಂಧಪಟ್ಟಂತೆ ವ್ಯಕ್ತವಾಗಿರುವ ಕಳವಳಗಳನ್ನು ಮನಗಂಡು, ತಮ್ಮ ಹಾಲಿ ಪದ್ದತಿಗಳನ್ನು ಹಣಕಾಸು ವ್ಯವಹಾರದಲ್ಲಿ ಜನರನ್ನು ಸೇರಿಸಿಕೊಳ್ಳುವ ಉದ್ದೇಶದೊಂದಿಗೆ ಸರಿಹೊ0ದುವ ಹಾಗೆ ಅವುಗಳನ್ನು ಪುನರ್ ಪರಿಶೀಲನೆ ಮಾಡುವಂತೆ ಬ್ಯಾಂಕುಗಳಿಗೆ ಒತ್ತಾಯಿಸಲಾಗಿದೆ. ಹಲವಾರು ಬ್ಯಾಂಕುಗಳಲ್ಲಿ ಕನಿಷ್ಟ ಶಿಲ್ಕು ಮತ್ತು ಚಾರ್ಜುಗಳ ಅಗತ್ಯವನ್ನು ವಿಧಿಸಿರುವುದು, (ಹಲವಾರು ಉಚಿತ ಸೌಲಭ್ಯಗಳನ್ನು ಒದಗಿಸಿದ್ದರೂ), ಬ್ಯಾಂಕು ಖಾತೆಗಳನ್ನು ತೆರೆಯುವುದರಿಂದ / ನಿರ್ವಹಿಸುವುದರಿಂದ ಭಾರೀ ಪ್ರಮಾಣದ ಜನರನ್ನು ನಿರ್ಬಂಧಿಸಿದಂತಾಗಿದೆ.

3.ಈ ಸಂದರ್ಭದಲ್ಲಿ ಹಣಕಾಸು ವ್ಯವಹಾರದಲ್ಲಿ ಹೆಚ್ಚಿನ ಜನರನ್ನು ಒಳಪಡಿಸುವ ಉದ್ದೇಶವನ್ನು ಸಾಧಿಸುವ ದೃಷ್ಟಿಯಿಂದ, ಯಾವ ಶಿಲ್ಕು ಹಾಗೂ ಚಾರ್ಜುಗಳು ಇಲ್ಲದ ಅಥವಾ ಕಡಿಮೆ ಶಿಲ್ಕು ಹಾಗೂ ಚಾರ್ಜುಗಳಿರುವ ಮೂಲ ಬ್ಯಾಂಕಿಂಗ್ 'ಯಾವ ನಿರ್ಬಂಧಗಳಿಲ್ಲದ' ಖಾತೆಯನ್ನು ಜನರಿಗೆ ದೊರೆಯುವಂತೆ ಮಾಡಬೇಕೆಂದು ಎಲ್ಲ ಬ್ಯಾಂಕುಗಳಿಗೆ ಸಲಹೆ ಮಾಡಲಾಗಿದೆ. ಇದರಿಂದ ಜನಸಂಖ್ಯೆ ಬಹು ದೊಡ್ಡ ವರ್ಗಗಳಿಗೆ ಅಂಥ ಖಾತೆಗಳ ಸೌಲಭ್ಯ ದೊರಕಿಸಿಕೊಟ್ಟಂತಾಗುತ್ತದೆ. ಅಂಥ ಖಾತೆಗಳಲ್ಲಿ ವ್ಯವಹಾರಗಳ ಸ್ವರೂಪವನ್ನು ಮತ್ತು ಸಂಖ್ಯೆಯನ್ನು ನಿರ್ಬಂಧಿಸಬಹುದು. ಆದರೆ, ಅದನ್ನು ಗ್ರಾಹಕನಿಗೆ ಪಾರದರ್ಶಕ ರೀತಿಯಲ್ಲಿ ತಿಳಿಯಪಡಿಸಬೇಕು. 'ಯಾವ ನಿರ್ಬಂಧಗಳಿಲ್ಲದ' ಖಾತೆಯ ಬಗ್ಗೆ, ಪಾರದರ್ಶಕ ರೀತಿಯಲ್ಲಿ ಸೌಕರ್ಯಗಳು ಮತ್ತು ಚಾರ್ಜುಗಳನ್ನು ಸೂಚಿಸಿ ತಮ್ಮ ವೆಬ್‌ಸೈಟ್‌ಗಳಲ್ಲಿ ಪ್ರಚುರಪಡಿಸುವುದೂ ಸೇರಿದಂತೆ ವ್ಯಾಪಕ ಪ್ರಚಾರ ನೀಡುವಂತೆ ಎಲ್ಲಾ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

4.ಬ್ಯಾಂಕು ತೆರೆದ ಅಂಥ ಠೇವಣಿ ಖಾತೆಗಳ ಸಂಖ್ಯೆಯನ್ನು ಮೂರು ತಿಂಗಳಿಗೊಮ್ಮೆ ವರದಿ ಮಾಡತಕ್ಕದ್ದು.

5.ಈ ಬಗ್ಗೆ ತುರ್ತು ಕ್ರಮ ತೆಗೆದುಕೊಂಡು ಅನುಪಾಲನೆಯನ್ನು ಒಂದು ತಿಂಗಳೊಳಗೆ ವರದಿ ಮಾಡತಕ್ಕದ್ದು.

6.ದಯವಿಟ್ಟು ಸ್ವೀಕೃತಿ ನೀಡಿ.

**ತಮ್ಮ ವಿಶ್ವಾಸಿ,**
**(ಪ್ರಶಾಂತ್ ಸರಣ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು**